# <u>ಪ್ರತಿಕಾ ಪ್ರಕಟಣೆ</u>

## <u>ಕಲಬುರಗಿ ನಗರದಲ್ಲಿ 05 ಮೋಟಾರ ಸೈಕಲಗಳು ಕಳ್ಳತನ ಮಾಡಿದಇಬ್ಬರುಆರೋಪಿತರ ಬಂಧನ</u>

ದಿನಾಂಕ 01/01/2022 ರಂದುಬೆಳಿಗ್ಗೆ ಸಮಯದಲ್ಲಿ ಫಿರ್ಯಾದಿ ತನ್ನ ಮನೆಯಿಂದHero Splender Plus KA 32 ES 9036 ಮೇಲೆ ತನ್ನಗೆಳೆಯ ಶಶಿಕಾಂತ ತಂದೆ ಹಣಮಂತಗ ವಠಾರಇಬ್ಬರು ಕುಳಿತುಕೊಂಡು ಕುರಿಖರೀದಿ ಕುರಿತು ಕಲಬುರಗಿ ನಗರದ ನೆಹರುಗಂಜದಲ್ಲಿಕುರಿ ಮಾರಾಟ ಮಾಡುವ ಸ್ಥಳಕ್ಕೆ ಹೋಗುವ ಕುರಿತು ಬೆಳಿಗ್ಗೆ 10-00 ಗಂಟೆ ಸುಮಾರಿಗೆ ನೆಹರುಗಂಜ ಎ.ಪಿ.ಎಂ.ಸಿ. ಗೇಟ ಒಳಗಡೆ ಮೋಟಾರ ಸೈಕಲ ಪಾರ್ಕಿಂಗ ಮಾಡಿಕುರಿತರಲು ಹೋಗಿ ವಾಪಸ್ಸು ಬೆಳಗಿನ 10-30 ಗಂಟೆ ಸುಮಾರಿಗೆ ಬಂದು ನೋಡಲಾಗಿ ಮೋಟಾರ ಸೈಕಲ ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಎಂದು ಶ್ರೀ ಅನಿಲ ತಂದೆ ಮಾರುತಿ ಪಟ್ಟಣಕರ ಸಾ: ಕೆರಿಭೋಸಗಾಗ್ರಾಮಇವರುಕೊಟ್ಟದೂರಿನಆಧಾರದ ಮೇಲಿಂದ ಚೌಕ ಪೊಲೀಸ ಠಾಣೆಯಲ್ಲಿಗುನ್ನೆ ನಂಬರ 08/2022 ಕಲಂ 379 ಐಪಿಸಿ ಪ್ರಕರಣದಾಖಲಾಗಿದ್ದುಇರುತ್ತದೆ.

ಸದರ ಪ್ರಕರಣದಲ್ಲಿ ಕಳುವಾದ ಮೋಟಾರ ಸೈಕಲ ಮತ್ತುಆರೋಪಿ ಪತ್ತೆಕುರಿತುಶ್ರೀ ವೈ.ಎಸ್. ರವಿಕುಮಾರ ಐ.ಪಿ.ಎಸ್. ಪೊಲೀಸ ಆಯುಕ್ತರು ಕಲಬುರಗಿ ನಗರ, ಶ್ರೀ ಅಡ್ಡೂರ ಶ್ರೀನಿವಾಸಲು ಐ.ಪಿ.ಎಸ್. ಉಪ ಪೊಲೀಸ ಆಯುಕ್ತರು ಕಲಬುರಗಿ, ಶ್ರೀ ಶ್ರೀಕಾಂತ ಕಟ್ಟಿಮನಿ ಕೆ.ಎಸ್.ಪಿ.ಎಸ್. ಉಪ ಪೊಲೀಸ ಆಯುಕ್ತರು (ಸಂಚಾರ&ಅಪರಾಧ) ಕಲಬುರಗಿ, ಶ್ರೀ ದೀಪನ ಎಂ.ಎನ್. ಐ.ಪಿ.ಎಸ್. ಎ.ಸಿ.ಪಿ. ಉತ್ತರ ಉಪವಿಭಾಗ ಕಲಬುರಗಿರವರ ಮಾರ್ಗದರ್ಶನದಲ್ಲಿ ಶ್ರೀರಾಘವೇಂದ್ರ ಹೆಚ.ಎಸ್. ಪಿ.ಐ ಬ್ರಹ್ಮಪೂರ ಹೆಚ್ಚುವರಿ ಪ್ರಭಾರಚೌಕ ಪೊಲೀಸ ಠಾಣೆ ಕಲಬುರಗಿರವರ ನೇತೃತ್ವದಲ್ಲಿ ಮತ್ತು ಶ್ರೀ ಬಸವರಾಜ ಮಂಜಾಳಕರ ಪಿ.ಎಸ್.ಐ.ಶ್ರೀ ಶಿವಶರಣಪ್ಪ ಬೋಚರೆಎ.ಎಸ್.ಐ.ಸಿಬ್ಬಂದಿಯವರಾದ ಸಿದ್ರಾಮಯ್ಯ, ಉಮೇಶ, ಅಶೋಕ ಸುತಾರ ನಾಗೇಂದ್ರ, ವಿಜಯಕುಮಾರ, ರವರನ್ನು ಒಳಗೊಂಡ ತಂಡರಚನೆ ಮಾಡಿದ್ದು,ಇಂದು ದಿನಾಂಕ 19/01/2022 ರಂದು ಬೆಳಗಿನ ಸಮಯದಲ್ಲಿತಾಜ ಸುಲ್ತಾನಪೂರರಿಂಗರೋಡಕ್ರಾಸನಲ್ಲಿ ನಂಬರ ಪ್ಲೇಟಇರಲಾರದ ಮೋಟಾರ ಸೈಕಲ ಮೇಲೆ ಹೊರಟಾಗಆರೋಪಿತರಾದ1)ವಿಕಾಸ ತಂದೆಆನಂದ ಹೊಸಮನಿ ಸಾ: ಕೋರವಾರಗ್ರಾಮ ತಾ:ಕಾಳಗಿ2) ರಾಮಚಂದ್ರತಂದೆಆನಂದ ಹೊಸಮನಿ ಸಾ: ಕೋರವಾರಗ್ರಾಮ ತಾ:ಕಾಳಗಿ ಇವರುಗಳಿಗೆ ಅವರಿಗೆ ಹಿಡಿದು ವಿಚಾರಣೆಗೆ ಒಳಪಡಿಸಿದಾಗ ಅವರಿಬ್ಬರುಕಲಬುರಗಿ ನಗರದಕಲಬುರಗಿ ನಗರನೆಹರುಗಂಜ ಎ.ಪಿ.ಎಂ.ಸಿ. ಗೇಟ ಒಳಗಡೆ ಮತ್ತು ವೆಂಕಟೇಶ ಶೋ ರೂಮುಎದುರುಗಡೆ ಮತ್ತು ಕಲಬುರಗಿ ನಗರದಇತರೇ ಕಡೆಗಳಲ್ಲಿ 05 ಮೋಟಾರ ಸೈಕಲಗಳು ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡು, ಕಳ್ಳತನ ಮಾಡಿದ1)ಕಪ್ಪು ಬಣ್ಣದ ಹಿರೋ ಸ್ಪೆಂಡರ ಪ್ರೋ 2)ಸಿಲ್ವರ ಕಲರ ಹಿರೋ ಸ್ಪೆಂಡರ ಪ್ಲಸ 3)ಸಿಲ್ವರ ಕಲರ ಹಿರೋ ಸ್ಪೆಂಡರ 4)ಒಂದು ಹಸಿರು ಬಣ್ಣದ ಹಿರೋ ಸ್ಪೆಂಡರ ಪ್ಲಸ 5) ಕಪ್ಪು ಬಣ್ಣದ ಹಿರೋ ಸ್ಪೆಂಡರಪ್ಲಸKA 32 ES 9036 ಹೀಗೆ ಒಟ್ಟು 3,50,000/- ರೂ.ಬೆಲೆವುಳ್ಳದ್ದು ನೇದ್ದವುಗಳು ತೋರಿಸಿ ಹಾಜರಪಡಿಸಿದಾಗ ಪಂಚರ ಸಮಕ್ಷಮದಲ್ಲಿಜಪ್ತಿ ಪಡಿಸಿಕೊಂಡಯ, ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಟ್ಟಿದ್ದು ಇರುತ್ತದೆ.

05 ಮೋಟಾರ ಸೈಕಲಗಳು ಕಳ್ಳತನ ಮಾಡಿದಆರೋಪಿತರನ್ನು ಬಂಧಿಸಿದ್ದಕ್ಕೆ ಮೇಲಾಧಿಕಾರಿಯವರು ಚೌಕ ಪೊಲೀಸ ಠಾಣೆಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.